ಕರ್ನಾಟಕ ವಿಧಾನ ಸಭೆ

ಸೋಮವಾರ 25ನೇ ಆಗಸ್ಟ್ 1997ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

(ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

1) ಸಂತಾಪ ಸೂಚನೆ:

ಅಧ್ಯಕ್ಷರು

ಹಿರಿಯ ಸ್ವಾತಂತ್ರ ಯೋಧ ಹಾಗೂ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶೀ ಎನ್.ಕೆ.ಪುಟ್ಟೆಗೌಡ ಅವರು ದಿನಾಂಕ 21.8.97ರಂದು ನಿಧನ ಹೊಂದಿದ ಬಗ್ಗೆ ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇವೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಶ್ರಿಯುತರು ವೃತ್ತಿಯಲ್ಲಿ ಕೃಷಿಕರಾಗಿ, ಸಮಾಜ ಸೇವಕರಾಗಿ, 1941-45ರ ಅವಧಿಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದಾಗಿರುತ್ತದೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನಾಚರಿಸಿತು)

ಅಧ್ಯಕ್ಷರು: ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

2) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ: ಮೈಸೂರು ಮೆಟ್ರೋಪೋಲ್ ಹೋಟೆಲ್ ಗುತ್ತಿಗೆಗೆ ನೀಡಿದ ಕಟ್ಟಡ ಕುರಿತು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಈ ಹಿಂದೆ ಮೆಟ್ರೋಪೋಲ್ ಹೋಟೆಲ್‌ಗೆ ನೀಡಲಾಗಿದ್ದ ಲೋಕೊಪಯೋಗಿ ಇಲಾಖೆಗೆ ಸೇರಿದ ಕಟ್ಟಡವನ್ನು ಮುಂದೆ ಯಾವ ಉದ್ದೇಶಕ್ಕೆ ಬಳಸಲು ಯೋಚಿಸಲಾಗುತ್ತಿದೆ?

ಆ) ಇದನ್ನು ಮತ್ತೆ ಖಾಸಗಿಯವರಿಗೆ ಹೋಟೆಲ್ ನಡೆಸಲು ನೀಡಲಾಗುವುದೇ? (ಈ ಬಗ್ಗೆ ಆಸಕ್ತ ಖಾಸಗಿ ಉದ್ಯಮಿಗಳ ಹೆಸರನ್ನು ತಿಳಿಸುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹೋಟೆಲ್ ಉದ್ಯಮಕ್ಕಾಗಿ ಬಳಸಲು ಉದ್ದೇಶಿಸಲಾಗಿದೆ.

ಆ) ಕೆ.ಎಸ್.ಟಿ.ಡಿ.ಸಿ.ಯಿಂದ ಅಥವಾ ಟೆಂಡರ್ ಮೂಲಕ ಖಾಸಗಿಯವರಿಂದ ಹೋಟೆಲ್ ನಡೆಸಲು ಪರಿಶೀಲಿಸಲಾಗುತ್ತಿದೆ.

ಶ್ರೀ ಹೆಚ್ಎಸ್.ಶಂಕರಲಿಂಗೇಗೌಡ: ಅಧ್ಯಕ್ಷರೇ, ಒಂದು ಪೀಠಿಕೆ. ಮೈಸೂರಿನ ಮೆಟ್ರೋಪೋಲ್ ತನ್ನದೇ ಆದ ಐತಿಹಾಸಿಕ ಹಿನ್ನೆಲೆ ಹೊಂದಿದೆ. ಅರಸರ ಬಳುವಳಿಯಾಗಿ ಬಂದ ಹೋಟೆಲನ್ನು ರಿಟ್ಜ್‌ಗ್ರೂಪ್ ಹೋಟೆಲಿಗೆ ಕೊಟ್ಟು 44 ಲಕ್ಷ ರೂಗಳು ಬಾಕಿ ಇರುತ್ತವೆ. ಈಗ ಅದನ್ನು ನ್ಯಾಯಾಲಯದ ಮೂಲಕ ಬಿಡಿಸಿಕೊಂಡು ಲೋಕೋಪಯೋಗಿ ಇಲಾಖೆಯು ತಮ್ಮ ನಾಮಫಲಕವನ್ನು ಅಲ್ಲಿ ಹಾಕಿದೆ. ಆದರೆ ಅದನ್ನು ಕಬಳಿಸಲು ರಣಹದ್ದುಗಳು ಮೇಲೆ ಹಾರಾಡುತ್ತಿವೆ. ಈ ರಣಹದ್ದುಗಳಿಗೆ ಕುಮ್ಮಕ್ಕು ಕೊಡುವ ರಾಜಕೀಯ ಶಕ್ತಿಗಳೂ ಸೇರಿಕೊಂಡು ಆ ಆಸ್ತಿ ಹೊಡೆಯಲು ಹೋಗುತ್ತಿರುವ ಪರಿಸ್ಥಿತಿ ನೋಡಿದಾಗ ಮಹಾರಾಜರು ಕೊಡುಗೆಯಾಗಿ ಕೊಟ್ಟ ಈ ಕಟ್ಟಡ ವಿನಾಶದ ಅಂಚಿಗೆ ಹೋಗುತ್ತಿದೆ ಅಂದರೆ ತಪ್ಪಾಗಲಾರದು. 44 ಲಕ್ಷ ರೂ. ಬಾಕಿ ಇರುವ ಹಳೆ ಹೋಟೆಲ್ ಮಾಲೀಕನಿಂದ ವಸೂಲಿಗೆ ಏನು ಮಾಡಿದ್ದಾರೆ? ಮತ್ತು ಕೆಎಸ್‌ಟಿಡಿಸಿ ಸುಮಾರು 30 ಹೋಟೆಲ್‌ಗಳನ್ನು ನಡೆಸುತ್ತಿದ್ದು ಒಂದು ವರ್ಷದ ಉತ್ಪತ್ತಿ 7 ಕೋಟಿ ರೂ.ಎಂದು ತೋರುತ್ತಿದೆ.

ಶ್ರೀ ಸಿ.ಎಂ.ಉದಾಸಿ: ಅಧ್ಯಕ್ಷರೇ, ಈ ಹೋಟೆಲನ್ನು ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ನ್ಯಾಯಾಲಯಕ್ಕೆ ಹೋಗಿ ಸ್ವಾಧೀನಪಡಿಸಿಕೊಂಡಿದೆ. ಇದರಲ್ಲಿ 44 ಲಕ್ಷ ರೂ. ಬಾಡಿಗೆ ಹಣವನ್ನು ವಸೂಲು ಮಾಡಬೇಕಾಗಿದೆ ಎಂದು ಸದಸ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಕಾನೂನು ಕ್ರಮ ಕೈಗೊಂಡು ಹಣ ವಸೂಲು ಮಾಡುವ ಕ್ರಮ ಹಾಕಿಕೊಳ್ಳಲಾಗಿದೆ. ಜೊತೆಗೆ ಯಾರೋ ಇದನ್ನು ಕಬಳಿಸಲು ಹೊರಟಿದ್ದಾರೆ ಎಂಬ ತಮ್ಮ ಅನುಮಾನವನ್ನು ವ್ಯಕ್ತಮಾಡಿದ್ದಾರೆ. ಸರ್ಕಾರ ಇನ್ನೂ ಅಂತಿಮ ತೀರ್ಮಾನ